# ಇವಿಎಸ್ ಪಠ್ಯಪುಸ್ತಕ – ಆಮೂಲಾಗ್ರವಾಗಿ

ಚಂದ್ರಿಕಾ ಮುರಳೀಧರ್ ಮತ್ತು ರೋನಿತಾ ಶರ್ಮ

**ಹಿನ್ನೆಲೆ**

ರಾಷ್ಟ್ರೀಯ ಶಿಕ್ಷಣ ನೀತಿ, 1986, ಶಿಕ್ಷಣದ ಎಲ್ಲ ಹಂತಗಳಲ್ಲಿನ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಮತ್ತು ಸಮಾಜದ ಎಲ್ಲ ವರ್ಗಗಳಲ್ಲಿ ಪರಿಸರ ಕುರಿತ ಕಾಳಜಿಯನ್ನು ಸೇರಿಸಿ ಆ ಕುರಿತು ಜಾಗೃತಿಯನ್ನು ರೂಪಿಸುವ ಅಗತ್ಯಕ್ಕೆ ಒತ್ತು ನೀಡಿತು. ಎನ್‌ಸಿಎಫ್ 2005ರ ಮಾರ್ಗದರ್ಶಿ ಸೂತ್ರಗಳು ಈ ಕೆಳಗಿನವುಗಳಿಗೆ ಒತ್ತು ನೀಡುತ್ತವೆ:

a. ಜ್ಞಾನವನ್ನು ಶಾಲೆಯ ಹೊರಗಿನ ಬದುಕಿಗೆ ಸಂಪರ್ಕಿಸುವುದು
b. ಕಲಿಕೆಯು ಉರು ಹೊಡೆಯುವ ವಿಧಾನದಿಂದ ದೂರ ಸರಿಯುವುದನ್ನು ಖಚಿತಪಡಿಸುವುದು
c. ಮಕ್ಕಳು ಪಠ್ಯಪುಸ್ತಕ ಕೇಂದ್ರಿತರಾಗಿ ಉಳಿಯದೆ ಒಟ್ಟಾರೆ ಅಭಿವೃದ್ಧಿ ಸಾಧಿಸುವ ಅವಕಾಶವನ್ನು ಒದಗಿಸುವುದಕ್ಕಾಗಿ ಪಠ್ಯಕ್ರಮವನ್ನು ಸಮೃದ್ಧಗೊಳಿಸುವುದು
d. ಪರೀಕ್ಷೆಗಳಲ್ಲಿ ಹೆಚ್ಚು ನಮ್ಯತೆ ತಂದು ಅವುಗಳನ್ನು ತರಗತಿಯ ಚಟುವಟಿಕೆಗಳೊಂದಿಗೆ ಏಕೀಕರಿಸುವುದು ಮತ್ತು ದೇಶದ ಪ್ರಜಾತಾಂತ್ರಿಕ ರಾಜಕೀಯ ವ್ಯವಸ್ಥೆಯೊಳಗೆ, ಕಾಳಜಿಯುಕ್ತ  ವ್ಯಾಪಕ ಅಸ್ಮಿತೆಯನ್ನು ಪೋಷಿಸುವುದು

'ಹೊರೆ ಇಲ್ಲದೆ ಕಲಿಯುವುದು' ಎನ್ನುವ ಯಶ್ ಪಾಲ್ ವರದಿಯಲ್ಲಿ, ಮಗುವು ಜ್ಞಾನಸಂಗ್ರಾಹಕ ಎಂಬ ನಮ್ಮ ಗ್ರಹಿಕೆಯನ್ನು ಬದಲಾಯಿಸುವ ಹೊರತು ಹಾಗೂ ಪಠ್ಯಪುಸ್ತಕಗಳನ್ನು ಪರೀಕ್ಷೆಯ ಆಧಾರವಾಗಿ ಬಳಸುವ ಸಂಪ್ರದಾಯವನ್ನು ಮೀರಿದ ಹೊರತು ಶಾಲಾ ಕಲಿಕೆಯು ಆನಂದಮಯ ಅನುಭವವಾಗಲಾರದು ಎಂದು ಹೇಳಲಾಗಿದೆ.

ಈ ಹಿನ್ನೆಲೆಯಲ್ಲಿ, ಮೇಲಿನ ಅಂಶಗಳ ಆಧಾರದಲ್ಲಿ, ಶಿಕ್ಷಣದ ಗುರಿಗೆ ಸರಿದೂಗಿಸಲು  ಪಠ್ಯಪುಸ್ತಕಗಳ ಕೂಲಂಕಷ ಪರೀಕ್ಷೆಯ ಅಗತ್ಯ ಕಂಡುಬಂದಿದೆ ಮಾತ್ರವಲ್ಲದೆ, ಪಠ್ಯಕ್ರಮ, ಮತ್ತು ಪಠ್ಯಪುಸ್ತಕಗಳನ್ನು ಕುರಿತು ಮರುಚಿಂತನೆ ನಡೆಸಬೇಕಾದ ಅನಿವಾರ್ಯತೆಯೂ ಕಾಣುತ್ತಿದೆ. ಹೊಸ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು 2005ರಲ್ಲಿ ಬರೆಯಲಾಗಿತ್ತು.

**ಇವಿಎಸ್ ಎಂದರೇನು?**

ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿ ಲಭ್ಯವಿದ್ದು ಅವುಗಳನ್ನು ನಮ್ಮ ಆರ್ಥಿಕ ಪ್ರಗತಿಗಾಗಿ ಬಳಸಿಕೊಳ್ಳಬಹುದು ಎಂಬ  ಮಿಥ್ಯೆಯನ್ನು 1864 ರಲ್ಲೇ ಜಾರ್ಜ್ ಪರ್ಕಿನ್ಸ್ ಬಯಲಿಗೆಳೆದಿದ್ದ. 1864 ರಲ್ಲಿ

ಪ್ರಕಟಗೊಂಡ ಅವನ ಪುಸ್ತಕ 'ಮ್ಯಾನ್ ಅಂಡ್ ನೇಚರ್'ನಲ್ಲಿ, ನೈಸರ್ಗಿಕ ಸಂಪನ್ಮೂಲಗಳು ಬರಿದಾಗದಿರುವಿಕೆಯನ್ನು ಕುರಿತು ತನ್ನ ಕಾಳಜಿಯನ್ನು ಹೊರಗೆಡಹಿದ್ದ ಹಾಗೂ ಅತಿಸಮೃದ್ಧಿಯ ಸುಳ್ಳನ್ನು ನಿರಾಕರಿಸಿದ್ದ. ಅಲ್ಲದೆ ಸುಧಾರಣೆಯ ಅಗತ್ಯವನ್ನು ಎತ್ತಿ ಹಿಡಿದಿದ್ದ.

ಶಾಲಾ ಶಿಕ್ಷಣದಲ್ಲಿ ಪರಿಸರವನ್ನು ಕುರಿತ ಕಾಳಜಿಯನ್ನು ಭಾರತದಲ್ಲಿ 1980 ರಲ್ಲಿ ಸೇರಿಸಲಾಯಿತು. ಪರಿಸರ ಅಧ್ಯಯನವನ್ನು ಕುರಿತ ಪಠ್ಯಪುಸ್ತಕಗಳ ಮೂಲಕ ಈ ಕಾಳಜಿಯೆಡೆಗೆ ಗಮನ ಹರಿಸಲಾಯಿತು. ತಮ್ಮ ಪುಸ್ತಕ 'ಎಜುಕೇಶನ್, ಕಾನ್ ಫ್ಲಿಕ್ಟ್ ಅಂಡ್ ಪೀಸ್' (ಅಧ್ಯಾಯ 3, ಬಿಟ್ವೀನ್ ಸೈನ್ಸ್ ಅಂಡ್ ಸೈಂಟಿಫಿಕ್ ಟೆಂಪರ್) ಪುಸ್ತಕದಲ್ಲಿ ಕೃಷ್ಣ ಕುಮಾರ್ ಅವರು, 'ಪಿಲಿಗ್ರಿಮೇಜಸ್ ಆಫ್ ಮಾಡರ್ನ್ ಇಂಡಿಯಾ' ಎಂಬ ಶೀರ್ಷಿಕೆಯ ಅಡಿಯಲ್ಲಿ (ಈಗ 'ಸೋರ್ಸಸ್ ಆಫ್ ಪಲೂಷನ್' ಎಂಬ ಪರಿಷ್ಕೃತ ಶೀರ್ಷಿಕೆಯನ್ನು ಹೊಂದಿದೆ) 1960 ರಲ್ಲಿ ಪಠ್ಯಪುಸ್ತಕಗಳಲ್ಲಿ ಕಾಣಿಸಿಕೊಂಡ, ಉದ್ದನೆಯ ಮತ್ತು ಸಕ್ರಿಯ ಹೊಗೆಕೊಳವೆಗಳನ್ನು ಹೊಂದಿರುವ ಕಾರ್ಖಾನೆಯ ಚಿತ್ರಣದ ಕುರಿತು ಮಾತನಾಡುತ್ತಾರೆ. ಅಲ್ಲದೆ, ಇವಿಎಸ್ ಸಾಮಗ್ರಿಗಳು ಪ್ರಕೃತಿಯೊಡನೆ ಸಹಜೀವನ ಅಥವಾ ಪ್ರಾಣಿಗಳು ಮತ್ತು ಸಸ್ಯಗಳು ಮಾತ್ರವಲ್ಲದೆ ನದಿಗಳು, ಪರ್ವತಗಳು ಮತ್ತು ಸಾಗರ ಮುಂತಾದ ಭೌತಿಕ ಜಗತ್ತಿನ ಜೊತೆಗೆ ಹೊಂದಾಣಿಕೆ ಮಾಡುವ ಕಲ್ಪನೆಯನ್ನು ಅಭಿವೃದ್ಧಿಪಡಿಸಲು ಯತ್ನಿಸುತ್ತವೆ ಎಂದು ಅವರು ಹೇಳುತ್ತಾರೆ. ಪ್ರಕೃತಿಯ ಸಜೀವ ಮತ್ತು ನಿರ್ಜೀವ ಘಟಕಗಳ ಮೇಲೆ ಪ್ರಭಾವ ಬೀರುವ ಎಲ್ಲ ಮಾನವ ಕೃತ್ಯಗಳನ್ನು ಪರಿಶೀಲಿಸಬೇಕು ಎನ್ನುವುದು ಈ ಕಲ್ಪನೆಯ ಹಿಂದಿನ ಉದ್ದೇಶವಾಗಿದೆ.

ಪಠ್ಯಪುಸ್ತಕವನ್ನು ಬರೆಯಲು ನಾವು ಯೋಚಿಸುವ ಮೊದಲು, ಪಠ್ಯಪುಸ್ತಕದ ಗುಣಲಕ್ಷಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಕುರಿತು ಸ್ಪಷ್ಟತೆಯನ್ನು ಪಡೆಯಬೇಕಾದುದು ಅವಶ್ಯಕ. ಮೊದಲನೆಯದಾಗಿ ಲೇಖಕರು ವಿಷಯವನ್ನು ಕುರಿತು ಸಾಕಷ್ಟು ಅರಿವನ್ನು ಹೊಂದಿರಬೇಕು, ಎರಡನೆಯದಾಗಿ ಪ್ರಸ್ತುತಪಡಿಸಬೇಕಾದ ಅರಿವಿನ ಮಟ್ಟ, ಮೂರನೆಯದಾಗಿ (ಹಾಗೂ ಅತ್ಯಂತ ಪ್ರಮುಖವಾಗಿ) ಮಕ್ಕಳಿಗಾಗಿ ಬರೆಯಬೇಕು: ಅಂದರೆ ಅದೊಂದು ಮಿನಿ ವಿಶ್ವಕೋಶವಾಗಬಾರದು.

ಮೊದಲ ಅಂಶವನ್ನು ಕುರಿತು ನಾವು ನೋಡುವುದಾದರೆ, ಇವಿಎಸ್ ಕುರಿತು ನಮಗೆ ಏನು ತಿಳಿದಿದೆ? ಅದನ್ನು ವಿಸ್ತರಿಸಿ ಬರೆದಾಗ ಪರಿಸರ ಅಧ್ಯಯನ ಅಥವಾ ಪರಿಸರ ವಿಜ್ಞಾನ (ಎನ್‌ಸಿಇಆರ್‌ಟಿ ಸೂಚಿಸಿದಂತೆ, ಏಕರೂಪತೆಗಾಗಿ ನಾವು ಮೊದಲನೆಯದ್ದನ್ನು ಬಳಸುತ್ತೇವೆ) ಎಂಬುದಾಗಿ ನಾವು ಹೇಳಬಹುದು. ಈ ವಿಷಯವನ್ನು ಕುರಿತು ರಚಿಸಲಾದ ಪಠ್ಯಕ್ರಮದಲ್ಲಿ ಎರಡನೆಯ ಮತ್ತು ಮೂರನೆಯ ಅಂಶಗಳ ಕಡೆಗೆ ಗಮನ ಹರಿಸಬೇಕು.

ಇವಿಎಸ್ ಎನ್ನುವುದು ಸಮಾಜ ವಿಜ್ಞಾನ, ವಿಜ್ಞಾನ ಮತ್ತು ಪರಿಸರ ಶಿಕ್ಷಣದ ಒಳನೋಟಗಳ ಸಮ್ಮಿಲನವಾಗಿದೆ. ಈ ವಿಷಯವನ್ನು ಪ್ರಾಥಮಿಕ ಶಾಲೆಯ 3 ನೇ ತರಗತಿಯಲ್ಲಿ ಪರಿಚಯಿಸಲಾಗಿದ್ದು, 5 ನೇ ತರಗತಿಯ ತನಕ ಇದು ಮುಂದುವರಿಯುತ್ತದೆ. ಆದರೆ, ಇವಿಎಸ್ ಅಂಶಗಳನ್ನು 1 ನೇ ಮತ್ತು 2 ನೇ ತರಗತಿಗಳ ಗಣಿತ ಮತ್ತು ಭಾಷಾ ವಿಷಯಗಳಲ್ಲಿ ಒಳಗೊಳ್ಳುವುದಕ್ಕಾಗಿ ಪ್ರಯತ್ನಿಸಲಾಗುತ್ತಿದೆ. ಅಲ್ಲದೆ, ಹೆಚ್ಚಿನ ಪ್ರಾಥಮಿಕ ಶಾಲಾ ಪಠ್ಯಕ್ರಮಗಳು ಏಕೀಕೃತ ವಿಧಾನಕ್ಕಾಗಿ ಕೆಲಸ ಮಾಡಿರುವುದರಿಂದ, ಸಂಪರ್ಕಿತ ಮತ್ತು ಪರಸ್ಪರ ಸಂಬಂಧಿಸಿದ ಅರಿವನ್ನು ಅಭಿವೃದ್ಧಿಪಡಿಸುವುದು ಇತ್ಯಾದಿ ವಿಷಯಗಳ ಬದಲಿಗೆ ವಿಷಯವಸ್ತುಗಳನ್ನು ಇವಿಎಸ್ ಪ್ರಸ್ತಾವಿಸಿದೆ (ಇವಿಎಸ್,

ಎನ್‌ಸಿಇಆರ್‌ಟಿ ಪಠ್ಯಕ್ರಮ). ಇಲ್ಲಿ ಗಮನಿಸಬೇಕಾದ ಅತ್ಯಂತ ಪ್ರಮುಖ ವಿಷಯವೆಂದರೆ, ಮಗುವು ತನ್ನ ಸುತ್ತಮುತ್ತಲಿನ ಪರಿಸರವನ್ನು ಇಡಿಯಾಗಿ ನೋಡುತ್ತದೆ, ತತ್‌ಕ್ಷಣದ ಪರಿಸರದ ಘಟನೆಗಳನ್ನು ಗ್ರಹಿಸುತ್ತದೆ, ಮತ್ತು ಅನುಭವಗಳು ಮತ್ತು ಮಾಹಿತಿಯನ್ನು ವಿಂಗಡಿಸಿ ನೋಡುವುದಿಲ್ಲ. ಈ ವಿಧಾನವನ್ನು ಪರಿಗಣಿಸದಿದ್ದರೆ, ಇವಿಎಸ್ ಪಠ್ಯಪುಸ್ತಕವು ಪ್ರತ್ಯೇಕ ವಿಷಯಗಳನ್ನು ಒಳಗೊಂಡಿರುತ್ತದೆಯೇ ಹೊರತು ಮಗುವಿನಲ್ಲಿ ಜ್ಞಾನದ ಸಮಗ್ರ ಸೃಷ್ಟಿಯತ್ತ ಗಮನ ಹರಿಸುವುದಿಲ್ಲ.

ಇವಿಎಸ್ ವಿಷಯವನ್ನು ಯಾವ ರೀತಿ ಕಲ್ಪಿಸಲಾಗಿದೆ ಎಂಬುದನ್ನು ನೋಡಿದರೆ, ಇವಿಎಸ್ ಪುಸ್ತಕಕ್ಕೆ ಸಮರ್ಥ ಬರಹಗಾರರು/ ಲೇಖಕರು/ ಕೊಡುಗೆದಾರರು ಆಗಬಲ್ಲ ಈ ಕ್ಷೇತ್ರದ 'ತಜ್ಞ'ರನ್ನು ಗುರುತಿಸುವುದು ನಿಜಕ್ಕೂ ಸವಾಲಿನ ಕೆಲಸ. ಸಮಾಜ ವಿಜ್ಞಾನ, ವಿಜ್ಞಾನ ಮತ್ತು ಪರಿಸರ ಶಿಕ್ಷಣದಲ್ಲಿ ಪರಿಣತಿ ಹೊಂದಿರುವ ಸದಸ್ಯರನ್ನು ಒಗ್ಗೂಡಿಸುವುದು ಅಪೇಕ್ಷಣೀಯ. ಸಾಕಷ್ಟು ಸಮಯ ಈ ವಿಷಯವನ್ನು ಬೋಧಿಸಿರುವ ಶಿಕ್ಷಕರು, ಅಲ್ಲದೆ ಶಿಕ್ಷಣಶಾಸ್ತ್ರ, ಲಿಂಗ ಅಧ್ಯಯನ, ಮಕ್ಕಳ ವಿಕಾಸ ಮತ್ತು ಪಠ್ಯಕ್ರಮ ಅಧ್ಯಯನದ ಹಿನ್ನೆಲೆಯುಳ್ಳವರ ಅಗತ್ಯ ಇಲ್ಲಿದೆ (ಇವಿಎಸ್, ಎನ್‌ಸಿಇಆರ್‌ಟಿ ಪಠ್ಯಕ್ರಮ). ಇನ್ನು ಮುಂದೆ ಇವರನ್ನು ಪಠ್ಯಪುಸ್ತಕ ಸಮಿತಿಯ (ಟಿಸಿ) ತಜ್ಞರೆಂದು ಉಲ್ಲೇಖಿಸುತ್ತೇವೆ.

**ಇವಿಎಸ್ ಪಠ್ಯಪುಸ್ತಕ - ಸಂತೋಷದಾಯಕ ಕಲಿಕೆಗೆ ದಾರಿ**

ಟಿಸಿ ಯನ್ನು ರೂಪಿಸಿದ ಅನಂತರ ಸದಸ್ಯರು ಒಟ್ಟಾಗಿ ಕೆಲಸ ಮಾಡುವುದು ಅಗತ್ಯ. ಏಕೆಂದರೆ, ಈ ಹಿಂದೆ ಉಲ್ಲೇಖಿಸಿದ ಎಲ್ಲ ಅಂಶಗಳನ್ನು ಹೊಂದಿರುವ ಸಂಪನ್ಮೂಲ ಸಾಮಗ್ರಿಗಳನ್ನು ರಚಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಪಠ್ಯಕ್ರಮ ಮತ್ತು ತದನಂತರ ಪಠ್ಯಕ್ರಮಕ್ಕೆ ಚಾಲನೆ ನೀಡುವ 'ವಿಷಯವಸ್ತು'ವನ್ನು ಕುರಿತು ಒಮ್ಮತ ರೂಪಿಸುವುದು ಟಿಸಿ ಯ ಪ್ರಮುಖ ಕೆಲಸಗಳಲ್ಲಿ ಒಂದಾಗಿದೆ.

ವಿಷಯವಸ್ತುಗಳನ್ನು ಅಂತಿಮಗೊಳಿಸಿದ ಮೇಲೆ, ಪಠ್ಯಕ್ರಮವನ್ನು ಸ್ಪಷ್ಟವಾಗಿ ನಿರೂಪಿಸುವ ಕಠಿಣತಮ ಕೆಲಸವನ್ನು ಪೂರ್ಣಗೊಳಿಸಬೇಕು. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರಲ್ಲಿ (ಎನ್‌ಸಿಎಫ್ 2005) ಹೇಳಿರುವಂತೆ ಶಿಕ್ಷಣದ ಉದ್ದೇಶಗಳ ತತ್ತ್ವಗಳು, ಇವಿಎಸ್ ಫಲಿತಾಂಶದ ಕಲಿಕಾ ಉದ್ದೇಶಗಳು, ಮತ್ತು ಇವಿಎಸ್, ಎನ್‌ಸಿಇಆರ್‌ಟಿ ಪಠ್ಯಕ್ರಮದ ಕುರಿತು ಲೇಖಕರಿಗೆ ಅರಿವು ಇದೆಯೇ ಎಂಬುದನ್ನು ತಿಳಿದುಕೊಳ್ಳಬೇಕು. ಏಕೆಂದರೆ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳು ಇವುಗಳಿಗೆ ಹೊಂದಿಕೊಳ್ಳುತ್ತವೆ ಎಂಬುದನ್ನು ಖಚಿತಪಡಿಸಬೇಕಾಗುತ್ತದೆ.

ಪಠ್ಯಕ್ರಮವನ್ನು ನಿರ್ಣಯಿಸಿದ ಅನಂತರ, ಲೇಖಕರು ಅವರ ಪಠ್ಯಪುಸ್ತಕದ ಘಟಕಗಳನ್ನು ನಿರ್ಧರಿಸಬೇಕು. ಅದು ಪ್ರತಿಫಲಿಸಬೇಕಾದ ಶಿಕ್ಷಣಶಾಸ್ತ್ರೀಯ ವಿಧಾನ, ಮೌಲ್ಯಮಾಪನದ ಕಾರ್ಯವಿಧಾನಗಳು, ವಿಶದೀಕರಣದ ವಿಧಗಳು, ಚಟುವಟಿಕೆಗಳು, ಮಗುವಿನ ನೈಜ ಜೀವನದ ಅನುಭವಗಳನ್ನು ಒಳಗೊಳ್ಳುವುದು, ಹಾಗೂ ಪಠ್ಯಪುಸ್ತಕದ ವಿಷಯವು ಇವಿಎಸ್ ಕಲಿಕೆಯನ್ನು ತರಗತಿ ಕೋಣೆಗೆ ಸೀಮಿತಗೊಳಿಸದಿರುವುದನ್ನು ಖಚಿತಪಡಿಸುವುದು, ಇತ್ಯಾದಿಗಳನ್ನು ನಿರ್ಧರಿಸಬೇಕು. ಲಿಂಗ ಮತ್ತು ಸಾಮಾಜಿಕ ವಿಚಾರಗಳಂತಹ ಇತರ ಘಟಕಗಳ ಸಮಾನ ಒಳಗೊಳ್ಳುವಿಕೆಗೆ ಅವಕಾಶ ನೀಡಬೇಕು. ಎಲ್ಲಕ್ಕಿಂತಲೂ ಮಿಗಿಲಾಗಿ, ಪಠ್ಯಪುಸ್ತಕವು

(ಮುಖ್ಯವಾಗಿ 5 ನೇ ತರಗತಿಯ ಪಠ್ಯಪುಸ್ತಕ) ಇವಿಎಸ್ ಅನ್ನು ವಿಜ್ಞಾನ ಮತ್ತು 6 ನೇ ತರಗತಿಯ ಸಮಾಜ ವಿಜ್ಞಾನಕ್ಕೆ ಕೊಂಡಿಯನ್ನು ರೂಪಿಸಬೇಕು. ಇವಿಎಸ್ ನಿಂದ ಈ ವಿಷಯಗಳಿಗೆ ತಡೆರಹಿತವಾಗಿ ಸಾಗಲು ಇದರ ಅಗತ್ಯವಿದೆ.

**ಇವಿಎಸ್ ಪಠ್ಯಪುಸ್ತಕದ ರಚನೆ**

ಚಾಲ್ತಿಯಲ್ಲಿರುವ ಪಠ್ಯಕ್ರಮವು, ರೂಪಿಸಬೇಕಾದ ಪಠ್ಯಪುಸ್ತಕದ ವಿಷಯಗಳಿಗೆ ದೃಢವಾದ ಅಡಿಪಾಯವನ್ನು ಒದಗಿಸುತ್ತದೆ. ಪಠ್ಯಪುಸ್ತಕಗಳ ವಿಷಯವಸ್ತುಗಳ ಮೂಲಕ ಸಾಗುವ, ಪಠ್ಯಪುಸ್ತಕದ ಅಧ್ಯಾಯಗಳನ್ನು ಚೆನ್ನಾಗಿ ಯೋಚಿಸಿ ರಚಿಸಬೇಕು. ಮುಖ್ಯವಾಗಿ 3, 4 ಅಥವಾ 5 ನೇ ತರಗತಿಗಳಲ್ಲಿ ಯಾವ ತರಗತಿಯ ಸಂಜ್ಞಾನಾತ್ಮಕ ಹಂತಕ್ಕೆ ನಾವು ಗಮನ ಹರಿಸುತ್ತಿದ್ದೇವೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಸಾಮಾನ್ಯವಾಗಿ ಪಠ್ಯಪುಸ್ತಕದ ಗಾತ್ರವನ್ನು (ಅಂದರೆ ಪುಟಗಳ ಸಂಖ್ಯೆ) ನಿರ್ಬಂಧಿಸುವುದರಿಂದ, ಲೇಖಕರು ಈ ಕುರಿತು ತಿಳಿದುಕೊಳ್ಳುವುದು ಅಗತ್ಯ. ಆದರೆ ಅಗತ್ಯವಿರುವುದನ್ನು ಬರೆಯುವಾಗ ಅವರ ಪಾಲಿಗೆ ಇದೊಂದು ನಿರ್ಬಂಧವೆನಿಸಬಾರದು.

ಅಧ್ಯಾಯಗಳ ವಿಷಯಗಳನ್ನು ಗುರುತಿಸಿದ ಅನಂತರ, ಇವಿಎಸ್ ಪಠ್ಯಪುಸ್ತಕದ ಕೆಲವು ವಿಭಾಗಗಳನ್ನು ಕುರಿತು ನಾವು ಏಕಕಾಲದಲ್ಲಿ ಕಾರ್ಯ ನಿರ್ವಹಿಸಬೇಕು. ಅವುಗಳೆಂದರೆ:

1. ಶಿಕ್ಷಕರು ಮತ್ತು ಪೋಷಕರಿಗೆ ಟಿಪ್ಪಣಿ - ಇದು ಈ ಪಠ್ಯಪುಸ್ತಕವನ್ನು ಬರೆಯುವುದರ ಹಿಂದಿನ ತಾರ್ಕಿಕತೆ, ಪಠ್ಯಪುಸ್ತಕವು ಯಾವ ಮಾರ್ಗದರ್ಶಿ ಸೂತ್ರಗಳಿಗೆ ಹೊಂದಿಕೊಂಡಿದೆ, ಪಠ್ಯಪುಸ್ತಕದಲ್ಲಿರುವ ಶಿಕ್ಷಣಶಾಸ್ತ್ರದ ವಿಧಾನ, ಒಳಗೊಂಡಿರುವ ಕಾರ್ಯಗಳ ವಿಧಗಳು ಇತ್ಯಾದಿಗಳನ್ನು ಇಲ್ಲಿ ಉಲ್ಲೇಖಿಸಬೇಕು. ಶಿಕ್ಷಕರು ಮತ್ತು ಪೋಷಕರಿಬ್ಬರಿಗೂ ಪಠ್ಯಪುಸ್ತಕದ ಸ್ಥೂಲನೋಟವನ್ನು ನೀಡುವುದು ಈ ಟಿಪ್ಪಣಿಯ ಉದ್ದೇಶವಾಗಿದೆ.

2. ಶಿಕ್ಷಕರ ಪುಟ - ಈ ಪುಟವು, ವಿಷಯವಸ್ತುವಿಗೆ ಸಂಬಂಧಿಸಿದ ಅಧ್ಯಾಯಗಳ ವಿಷಯಗಳನ್ನು ಕುರಿತ ಸಂಕ್ಷಿಪ್ತ ವಿವರವಾಗಿರಬಹುದು. ಅಲ್ಲದೆ ಪಠ್ಯಕ್ರಮದಲ್ಲಿ ಒಳಗೊಂಡಿರುವ ಪ್ರತಿ ಅಧ್ಯಾಯದ ಪ್ರಮುಖ ಪರಿಕಲ್ಪನೆಗಳು ಮತ್ತು ಉದ್ದೇಶಗಳೊಂದಿಗೆ ಈ ಪಠ್ಯಪುಸ್ತಕವನ್ನು ಶಿಕ್ಷಕರು ಸಿದ್ಧ ಸಾಧನವಾಗಿ ಬಳಸುವಂತಿರಬೇಕು. ಶಿಕ್ಷಕರ ಪುಟದ ಪುಟಗಳ ಸಂಖ್ಯೆಯನ್ನು ಲೇಖಕರ ವಿವೇಚನೆಗೆ ಬಿಡಬೇಕು. ಉದಾಹರಣೆಗೆ, ಒಂದು ವೇಳೆ ಇವಿಎಸ್ ವಿಷಯವಸ್ತುವು ವಸ್ತ್ರ, ವಸತಿಗೆ ಸಂಬಂಧಿಸಿದ್ದು ಅಧ್ಯಾಯವು ಅದಕ್ಕೆ ಗಮನ ನೀಡಿದರೆ, ಆ ಪುಟವು ಈ ಕೆಳಗಿನ ವಿಷಯವನ್ನು ಹೇಳಬಹುದು:

> ಅಧ್ಯಾಯ 'ಎ'ಯು, ______ (ಯಾವ ರಾಜ್ಯದಲ್ಲಿ ಪಠ್ಯಪುಸ್ತಕವನ್ನು ಬರೆಯಲಾಗಿದೆಯೋ ಆ ರಾಜ್ಯದ ಹೆಸರು) ಜನರು ಧರಿಸುವ ವಿವಿಧ ಬಗೆಯ ಉಡುಪುಗಳನ್ನು ಗೌರವಿಸುವ ವಾತಾವರಣವನ್ನು ರೂಪಿಸುವ ಮತ್ತು ಉಡುಪುಗಳನ್ನು ತಯಾರಿಸುವುದಕ್ಕಾಗಿ ಬಳಸುವ ಬಟ್ಟೆಗಳನ್ನು ಕುರಿತ ಅರಿವನ್ನು ಬೆಳೆಸುವ ಉದ್ದೇಶವನ್ನು ಹೊಂದಿದೆ. ನೇಕಾರರ ಸಾಂಪ್ರದಾಯಿಕ ಜ್ಞಾನ ಮತ್ತು ಸಮುದಾಯಕ್ಕೆ ದರ್ಜಿಗಳು ನೀಡಿದ ಕೊಡುಗೆಯನ್ನು ಪ್ರಶಂಸಿಸಲು ಹಾಗೂ ಗೌರವಿಸಲು ಪ್ರಜ್ಞಾಪೂರ್ವಕ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಈ ಅಧ್ಯಾಯದಲ್ಲಿ ಒಳಗೊಂಡಿರುವ ಚಟುವಟಕೆಗಳೆಂದರೆ - ಚಿತ್ರಗಳ ಸಂಯೋಜನೆ, ಕೆಲವು ಚಿತ್ರಗಳೊಂದಿಗೆ ರೇಖಾಕೃತಿಗಳನ್ನು ಹೊಂದಿಸುವುದು, ಕ್ಷೇತ್ರ ಭೇಟಿ (ಸಮೀಪದ ದರ್ಜಿಯ ಅಂಗಡಿಗೆ) ಮತ್ತು ಪ್ರಯೋಗಗಳು. ಹಂಚಿಕೆ ಮತ್ತು ಆರೈಕೆಯ ಕೆಲಸಗಳನ್ನು ಒಳಗೊಳ್ಳುವ ಮೂಲಕ ಮಕ್ಕಳಲ್ಲಿ ಸಂವೇದನೆಯನ್ನು ಮೂಡಿಸುವ ಪ್ರಯತ್ನವನ್ನು ಮಾಡಲಾಗಿದೆ.

ಪುಟದಲ್ಲಿ ಒಳಗೊಳ್ಳಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ ವಿವಿಧ ಇವಿಎಸ್ ಕೌಶಲಗಳು. ಅವಲೋಕನ, ಚರ್ಚೆ, ಅಭಿವ್ಯಕ್ತಿ, ವಿವರಣೆ, ವರ್ಗೀಕರಣ, ಪ್ರಶ್ನಿಸುವುದು, ವಿಶ್ಲೇಷಣೆ, ಪ್ರಯೋಗ ನಡೆಸುವುದು, ನ್ಯಾಯ ಮತ್ತು ಸಮಾನತೆಯ ಬಗ್ಗೆ ಕಾಳಜಿ ಮತ್ತು ಸಹಕಾರ ಇತ್ಯಾದಿ ವಿಷಯವಸ್ತುಗಳ ಮೇಲೆ ಇವು ಗಮನಹರಿಸಬೇಕು. (ಇವಿಎಸ್ ಮೌಲ್ಯಮಾಪನ ಸಂಪನ್ಮೂಲ ಪುಸ್ತಕ, 1 ರಿಂದ 5 ನೇ ತರಗತಿಗಳು).

3. ಶಿಕ್ಷಕರ ಟಿಪ್ಪಣಿ - ಇವುಗಳನ್ನು ಪಠ್ಯಪುಸ್ತಕದುದ್ದಕ್ಕೂ ಅಳವಡಿಸಬಹುದು. ಒಂದು ನಿರ್ದಿಷ್ಟ ಪುಟದಲ್ಲಿ ಚರ್ಚಿಸಲಾಗುವ ಪರಿಕಲ್ಪನೆಯನ್ನು ಕುರಿತು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು ಈ ಟಿಪ್ಪಣಿಗಳ ಉದ್ದೇಶವಾಗಿದೆ. ಟಿಪ್ಪಣಿಯಲ್ಲಿರುವ ವಿಷಯವು, ಶಿಕ್ಷಕರಿಗೆ ಇನ್ನಷ್ಟು ಓದಲು ಮತ್ತು ಚರ್ಚಿಸಲಾಗುವ ವಿಷಯವನ್ನು ಕುರಿತು ಇನ್ನಷ್ಟು ಶೋಧನೆ ಮಾಡಲು ಒತ್ತಾಯಿಸಬೇಕು (ಮೇಲಿನ ಮೂರು ಅಂಶಗಳ ಸ್ಥಾನೀಕರಣವನ್ನು ಲೇಖಕರ ವಿವೇಚನೆಗೆ ಬಿಡಬಹುದು).

4. ಚಟುವಟಿಕೆಗಳಿಗಾಗಿ ಸಂಕೇತಗಳು/ಚಿಹ್ನೆಗಳು - ಬರೆಯಿರಿ, ಯೋಚಿಸಿ, ಗುಂಪಿನಲ್ಲಿ ಕೆಲಸ ಮಾಡಿರಿ, ನಾವು ಅದನ್ನು ಮಾಡೋಣ ಇತ್ಯಾದಿ ಚಟುವಟಿಕೆಗಳನ್ನು ವರ್ಣಿಸಲು ಬಳಸುವ ಸಂಕೇತಗಳು ಅಥವಾ ಚಿಹ್ನೆಗಳು ಪುಸ್ತಕದ ನೋಟವನ್ನು ವೃದ್ಧಿಸುತ್ತವೆ ಹಾಗೂ ಅವುಗಳ ಮೂಲಕ ಚಟುವಟಿಕೆಗಳೊಂದಿಗೆ ಗುರುತಿಸಿಕೊಳ್ಳಲು ಮಗುವಿಗೆ ಸಹಾಯ ಮಾಡುತ್ತವೆ.

ಸಚಿತ್ರ ವಿವರಣೆಗಳು ಯಾವುದೇ ಇವಿಎಸ್ ಪಠ್ಯಪುಸ್ತಕದ ಸಮಗ್ರ ಭಾಗವೆನಿಸುತ್ತವೆ. ರೇಖಾಚಿತ್ರಗಳು ಮತ್ತು ಚಿತ್ರಗಳನ್ನು ಸೇರಿಸುವಾಗ ಇವುಗಳ ನಡುವೆ ಸಮತೋಲನವನ್ನು ಕಾಪಾಡಲು ಪ್ರಯತ್ನಿಸಬೇಕು. ರೇಖಾಚಿತ್ರಗಳ ಉಪಸ್ಥಿತಿಯು ಮಗುವಿಗೆ ಪೆನ್ಸಿಲ್ ನ ಮೂಲಕ ಕಾಗದದೊಂದಿಗೆ ಸಂಪರ್ಕ ಸಾಧಿಸಲು ಉತ್ತೇಜಿಸಲಿದೆ ಹಾಗೂ ಮಗುವಿನ ಕಲಾತ್ಮಕ ಕೌಶಲವನ್ನು ಪೋಷಿಸುತ್ತದೆ. ಸಚಿತ್ರ ವಿವರಣೆಗಳನ್ನು ರಚಿಸುವವರು ರೇಖಾಚಿತ್ರಗಳಲ್ಲಿ ಸಮತೋಲನವನ್ನು ಸಾಧಿಸುವುದಕ್ಕೆ ಸಂಬಂಧಿಸಿದಂತೆ (ಮುಖ್ಯವಾಗಿ ಲಿಂಗ ಪ್ರಾತಿನಿಧಿತ್ವಕ್ಕೆ ಸಂಬಂಧಿಸಿದಂತೆ) ಜಾಗರೂಕರಾಗಿರಬೇಕು. ಉದಾಹರಣೆಗೆ, ಚಿತ್ರವು ಕುಟುಂಬಕ್ಕೆ ಸಂಬಂಧಿಸಿದ್ದರೆ, ತಾಯಿಯು ಮಕ್ಕಳನ್ನು ಎತ್ತಿಕೊಂಡಿರುವುದು ಮತ್ತು ಅವರ ಆರೈಕೆಯನ್ನು ಮಾಡುತ್ತಿರುವುದು ಅನಿವಾರ್ಯವಲ್ಲ. ತಂದೆಯು ಸಹ ಮನೆಯ ಕೆಲಸವನ್ನು ಮಾಡುವುದನ್ನು ತೋರಿಸಬಹುದು. ಈ ಪರಿಕಲ್ಪನೆಯನ್ನು ಶೋಧಿಸಲು ಸೂಕ್ತ ಪ್ರಶ್ನೆಗಳನ್ನು ಸೇರಿಸಬಹುದಾಗಿದೆ.

ಇವಿಎಸ್ ಪಠ್ಯಪುಸ್ತಕಗಳಲ್ಲಿನ ಪ್ರಶ್ನೆಗಳು 'ಹೌದು' ಅಥವಾ 'ಅಲ್ಲ' ಉತ್ತರ ನಿರೀಕ್ಷಿಸುವ ಪ್ರಶ್ನೆಗಳಿಗಿಂತಲೂ ಪರಿಶೋಧನಾತ್ಮಕ ಭಾಗವನ್ನು ಹೊರಗೆಡಹುವ ಸಾಮರ್ಥ್ಯವನ್ನು ಹೊಂದಿರಬೇಕು. ಮಕ್ಕಳಲ್ಲಿ ಉರು ಹೊಡೆದು ಕಲಿಯುವ ಕೌಶಲಗಳನ್ನು ಅಳೆಯುವ ಯತ್ನ ಮಾಡುವ, ಪಠ್ಯದ ಕೊನೆಯ ಪ್ರಶ್ನೆಗಳನ್ನು ಸೇರಿಸದಿದ್ದರೆ ಒಳ್ಳೆಯದು. ಉದಾಹರಣೆಗೆ, ಆಹಾರ ಮತ್ತು ಅದರ ಸೂಕ್ತ ಬಳಕೆ ಹಾಗೂ ಪೋಲು ಮಾಡುವುದನ್ನು ತಪ್ಪಿಸುವುದಕ್ಕೆ ಸಂಬಂಧಿಸಿದ ವಿಷಯವನ್ನು ಚರ್ಚಿಸುತ್ತಿದ್ದರೆ, ಈ ರೀತಿಯ ಪ್ರಶ್ನೆಗಳನ್ನು ಕೇಳಬಹುದು: ಹಬ್ಬ ಹರಿದಿನಗಳ ಅನಂತರ ಮನೆಯಲ್ಲಿ ಸೇವಿಸದೆ ಉಳಿದ ಆಹಾರವನ್ನು ಏನು ಮಾಡುತ್ತೀರಿ? ನಿಮ್ಮ ಅಕ್ಕಪಕ್ಕದ ಮನೆಯವರು ಏನು ಮಾಡುತ್ತಾರೆ? ಸೇವಿಸದೆ ಉಳಿದ ಆಹಾರವನ್ನು ಅವರು ಹೇಗೆ ಬಳಸುತ್ತಾರೆ? ನಿಮ್ಮ ಅಕ್ಕಪಕ್ಕದ ಎರಡು ಮನೆಗೆ ಭೇಟಿ ನೀಡಿ ಮತ್ತು ಕುಟುಂಬದ ಹಿರಿಯ ಸದಸ್ಯರಿಗೆ ಈ ಪ್ರಶ್ನೆಗಳನ್ನು ಕೇಳಿರಿ. ನಿಮ್ಮ ತಟ್ಟೆಯಲ್ಲಿರುವ ಎಲ್ಲ ಆಹಾರವನ್ನು ನೀವು ಸೇವಿಸುತ್ತೀರಾ? ಇಲ್ಲವಾದರೆ, ತಿನ್ನದೆ ಉಳಿದ ಆಹಾರವನ್ನು ಏನು ಮಾಡುತ್ತೀರಿ?

ಇವಿಎಸ್ ಕಲಿಸುವ ಶಿಕ್ಷಕರನ್ನು ಹೊಸ ಪಠ್ಯಪುಸ್ತಕಕ್ಕೆ ಅಭಿಮುಖವಾಗಿಸುವುದು ಪಠ್ಯಪುಸ್ತಕದ ಸಿದ್ಧತೆಗೆ ಸೂಕ್ತ ಉಪಸಂಹಾರವನ್ನು ನೀಡಲಿದೆ. ಪಠ್ಯಪುಸ್ತಕದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ತಲಪಿಸುವಲ್ಲಿ ಇದು ಶಿಕ್ಷಕರಿಗೆ ಸಹಾಯ ಮಾಡಲಿದೆ. ತರಗತಿಯಲ್ಲಿ ಪುಸ್ತಕಗಳನ್ನು ಹೇಗೆ ಬಳಸಲಾಗುತ್ತದೆ ಎನ್ನುವುದನ್ನು ಕುರಿತು ಇದು ಪಠ್ಯಪುಸ್ತಕಗಳ ಲೇಖಕರಿಗೆ ಒಳನೋಟವನ್ನು ನೀಡಲಿದೆ.

**ಇದನ್ನು ಮುಂದಕ್ಕೆ ಕೊಂಡೊಯ್ಯುವುದು!**

ಇವಿಎಸ್ ನ ಈ ಮೌಲ್ಯಗಳನ್ನು ಮುಂದಕ್ಕೆ ಕೊಂಡೊಯ್ಯುವುದು ಹೇಗೆ?

ಸಮಾಜ ವಿಜ್ಞಾನದ ಲಿಖಿತ ವರದಿಯು ರೂಢಿಗತ ಕಾಳಜಿಗಳನ್ನು ಮುನ್ನೆಲೆಗೆ ತರುತ್ತದೆ. ಅವೆಂದರೆ, ಸಮಾಜ ವಿಜ್ಞಾನಗಳು, ಮುಖ್ಯವಾಗಿ ಸ್ವಾತಂತ್ರ್ಯ, ನಂಬಿಕೆ, ಪರಸ್ಪರ ಗೌರವ ಮತ್ತು ವೈವಿಧ್ಯವನ್ನು ಗೌರವಿಸುವುದು ಇತ್ಯಾದಿ ಮಾನವ ಮೌಲ್ಯಗಳ ನೆಲೆಯನ್ನು ಸೃಷ್ಟಿಸುವ ಮತ್ತು ವಿಸ್ತರಿಸುವ ರೂಢಿಗತ ಜವಾಬ್ದಾರಿಯನ್ನು ಹೊಂದಿರುತ್ತವೆ ಎನ್ನುವುದು. ಹೀಗಾಗಿ ಸಮಾಜ ವಿಜ್ಞಾನದ ಬೋಧನೆಯು, ಈ ಮೌಲ್ಯಗಳಿಗೆ ಭೀತಿಯನ್ನೊಡ್ಡುವ ಸಾಮಾಜಿಕ ಶಕ್ತಿಗಳನ್ನು ಕುರಿತು ಎಚ್ಚರಿಸಲು ಮಕ್ಕಳಲ್ಲಿ ವಿಮರ್ಶಾತ್ಮಕ ನೈತಿಕ ಮತ್ತು ಮಾನಸಿಕ ಶಕ್ತಿಯನ್ನು ತುಂಬಲು ಸಾಕಷ್ಟು ವಿನಿಯೋಜನೆ ಮಾಡುವ ಉದ್ದೇಶವನ್ನು ಹೊಂದಿರಬೇಕು. ಪರಿಸರಕ್ಕೆ ಎದುರಾಗುವ ಭೀತಿ, ಜಾತಿ/ವರ್ಗ ಅಸಮಾನತೆ, ಸರ್ಕಾರದ ದಬ್ಬಾಳಿಕೆ ಮುಂತಾದ ವಿಚಾರಗಳನ್ನು ಅಂತರ್‌ಶಿಸ್ತೀಯ ವಿಧಾನದ ಮೂಲಕ ಚರ್ಚಿಸಬೇಕು, ಪಠ್ಯಪುಸ್ತಕವು ಮಗುವಿನ ಚಿಂತನಾ ಪ್ರಕ್ರಿಯೆ ಮತ್ತು ಸೃಜನಶೀಲತೆಯನ್ನು ಉತ್ತೇಜಿಸಬೇಕು.

ಎನ್‌ಸಿಇಆರ್‌ಟಿಯ ಇತಿಹಾಸದ ಪಠ್ಯಪುಸ್ತಕದಲ್ಲಿ, ಭಾರತ ಮತ್ತು ಸಮಕಾಲೀನ ಪ್ರಪಂಚ I ಮತ್ತು II ರಲ್ಲಿ, 'ಜೀವನೋಪಾಯ, ಅರ್ಥಶಾಸ್ತ್ರ ಮತ್ತು ಸಮಾಜಗಳು' ಎನ್ನುವ ವಿಷಯವಸ್ತುವು ಮಕ್ಕಳಿಗೆ ಅರಣ್ಯವಾಸಿಗಳು, ರೈತರು, ಪಶುಪಾಲಕರು ಮುಂತಾದವರ ಬದುಕನ್ನು ಅರ್ಥಮಾಡಿಕೊಳ್ಳಲು ಮತ್ತು ಕೆಲವು ಕಾನೂನುಗಳು ಮತ್ತು

ಆಧುನಿಕೀಕರಣವು ಹೇಗೆ ಅವರ ಬದುಕಿನ ಮೇಲೆ ಪರಿಣಾಮ ಬೀರಿದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಇದು ಕೆಲಸ, ಬದುಕು, ವಿರಾಮ ಇತ್ಯಾದಿ ಇತರ ಅಂಶಗಳನ್ನು ಸಹ ಮುನ್ನೆಲೆಗೆ ತರುತ್ತದೆ. ಲಂಡನ್ ಮತ್ತು ಪ್ಯಾರಿಸ್ ನಂತಹ ಪ್ರಪಂಚದ ಮಹಾನ್ ನಗರಗಳು ಕೈಗಾರಿಕಾ ಕ್ರಾಂತಿಯ ಫಲವಾಗಿ ಹುಟ್ಟಿಕೊಂಡವು ಎಂಬ ಜ್ಞಾನವು, ವಸತಿ, ಕಡೆಗಣಿಸಲಾದ ಗುಂಪುಗಳ ಪರಿಸ್ಥಿತಿ, ಸ್ವಚ್ಛತೆ ಹಾಗೂ ಲಂಡನ್ ಭೂಗತ ರೈಲು ಸಂಚಾರದ ಅಳವಡಿಕೆ ಇತ್ಯಾದಿ ಸಮಸ್ಯೆಗಳನ್ನು ಕುರಿತು ಪರ್ಯಾಲೋಚಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ. ಚಾರ್ಲ್ಸ್ ಡಿಕನ್ಸ್ ಅವರು, ತಮ್ಮ 'ಡಾಂಬಿ ಅಂಡ್ ಸನ್' ಎಂಬ ಕಾದಂಬರಿಯಲ್ಲಿ, ನಿರ್ಮಾಣ ಪ್ರಕ್ರಿಯೆಯಲ್ಲಿ ಉಂಟಾಗುವ ಬೃಹತ್ ವಿನಾಶವನ್ನು ಕುರಿತು ಬರೆದಿದ್ದಾರೆ.

'ಮನೆಗಳನ್ನು ನೆಲಕ್ಕುರುಳಿಸಲಾಯಿತು: ಬೀದಿಗಳು ಶಿಥಿಲಗೊಂಡವು ಮತ್ತು ಮುಚ್ಚಿಹೋದವು; ನೆಲದಲ್ಲಿ ಆಳವಾದ ಗುಂಡಿಗಳು ಮತ್ತು ಕಂದಕಗಳನ್ನು ತೋಡಲಾಯಿತು; ಮಣ್ಣಿನ, ಬಗ್ಗಡದ ಅಗಾಧ ರಾಶಿಯನ್ನು ಬಿಸಾಡಲಾಯಿತು;..... ಅಲ್ಲಿ ಅಪೂರ್ಣವಾದ ನೂರಾರು ಸಾವಿರಾರು ಆಕಾರಗಳು ಮತ್ತು ವಸ್ತುಗಳಿದ್ದವು, ಅವೆಲ್ಲ ಅವರ ವಾಸಸ್ಥಳಗಳಲ್ಲಿ ವಿಸ್ತಾರವಾಗಿ ಬೆರೆತು ಹೋಗಿದ್ದವು, ತಲೆ ಕೆಳಗಾಗಿ ಭೂಮಿಯನ್ನು ತೋಡುತ್ತಿದ್ದವು....'

ಪ್ರಪಂಚದಾದ್ಯಂತ ಉಂಟಾದ ನಗರೀಕರಣ ಮತ್ತು ನಗರಗಳ ಅಭಿವೃದ್ಧಿ ಪ್ರಕ್ರಿಯೆಯು ಪರಿಸರ ವಿಜ್ಞಾನ ಮತ್ತು ಪರಿಸರಕ್ಕೆ ಕೊಡಲಿಯೇಟು ನೀಡಿದೆ. ಇಂಗ್ಲೆಂಡಿನ 19ನೇ ಶತಮಾನದ ನಗರಗಳಾದ ಲೀಡ್ಸ್, ಮ್ಯಾಂಚೆಸ್ಟರ್ ಇತ್ಯಾದಿ ನಗರಗಳಲ್ಲಿ ಕಾರ್ಖಾನೆಗಳ ಹೊಗೆಕೊಳವೆಗಳು ಹೊಗೆಯನ್ನು ಉಗುಳುತ್ತಿದ್ದುದ್ದನ್ನು ನೋಡಬಹುದು. ಜನರು ಶುದ್ಧ ಗಾಳಿಗಾಗಿ ಬೇಡಿಕೆ ಮುಂದಿಟ್ಟರು ಮತ್ತು ಶಾಸನದ ಮೂಲಕ ನಿಯಂತ್ರಣ ತರುವುದನ್ನು ಬಯಸಿದರು.

ಕಲ್ಕತ್ತಾ (ಇಂದಿನ ಕೋಲ್ಕತಾ) ನಗರವು ಸಹ ವಾಯು ಮಾಲಿನ್ಯದ ಸಮಸ್ಯೆಯನ್ನು ಎದುರಿಸಿತು ಹಾಗೂ ಕೈಗಾರಿಕೆಯಿಂದ ಹೊರಸೂಸುವ ಹೊಗೆಯನ್ನು ನಿಯಂತ್ರಿಸುವುದಕ್ಕಾಗಿ ಇಲ್ಲಿ 'ಬಂಗಾಳ ಹೊಗೆ ಪೀಡೆ ಆಯೋಗ (Bengal Smoke Nuisance Commission)'ವನ್ನು ರಚಿಸಲಾಯಿತು.

Scroll.in

ಹತ್ತು ಲಕ್ಷಕ್ಕಿಂತಲೂ ಹೆಚ್ಚಿನ ಆದಿವಾಸಿ ಮತ್ತು ಅರಣ್ಯವಾಸಿ ಕುಟುಂಬಗಳನ್ನು ಒಕ್ಕಲೆಬ್ಬಿಸಲು ಸುಪ್ರೀಂ ಕೋರ್ಟ್ ಆದೇಶ

ಹದಿನಾರು ರಾಜ್ಯಗಳಾದ್ಯಂತ 10 ಲಕ್ಷಕ್ಕಿಂತಲೂ ಹೆಚ್ಚಿನ ಆದಿವಾಸಿ ಮತ್ತು ಅರಣ್ಯವಾಸಿ ಕುಟುಂಬಗಳನ್ನು ಒಕ್ಕಲೆಬ್ಬಿಸಲು ಸುಪ್ರೀಂ ಕೋರ್ಟ್ ಆದೇಶ ನೀಡಿದೆ.

ಫೆಬ್ರುವರಿ 13 ರಂದು ಅರಣ್ಯ ಹಕ್ಕುಗಳ ಕಾಯಿದೆಯ ಮಾನ್ಯತೆಯನ್ನು ಪ್ರಶ್ನಿಸಿ ಅರ್ಜಿದಾರರು ಸಲ್ಲಿಸಿದ ದಾವೆಯನ್ನು ನ್ಯಾಯಾಲಯವು ಆಲಿಸಿದ ಅನಂತರ ಈ ಆದೇಶವು ಹೊರಬಿದ್ದಿದೆ. ಹೊಸ ಕಾನೂನಿನ ಅಡಿಯಲ್ಲಿ ಸಾಂಪ್ರದಾಯಿಕ ಅರಣ್ಯ ಭೂಮಿಯ ಮೇಲೆ ಯಾರ ಹಕ್ಕುಸಾಧನೆಯನ್ನು ತಿರಸ್ಕರಿಸಲಾಗಿದೆಯೋ ಅವರನ್ನು ಒಕ್ಕಲೆಬ್ಬಿಸಬೇಕು ಎಂದು ಅರ್ಜಿದಾರರು ಬೇಡಿಕೆ ಸಲ್ಲಿಸಿದ್ದರು.

ಕಾಡು, ಸಮಾಜ ಮತ್ತು ವಸಾಹತು ನೀತಿ ಎಂಬ ಅಧ್ಯಾಯವು, ಅರಣ್ಯನಾಶ, ತೋಟಗಾರಿಕೆ, ವಾಣಿಜ್ಯ ಮತ್ತು ವೈಜ್ಞಾನಿಕ ಕಾಡುಪ್ರದೇಶಗಳ ಹೆಚ್ಚಳ, ಭಾರತದಲ್ಲಿ ಮತ್ತು ಆಫ್ರಿಕಾದಲ್ಲಿ ವಸಾಹತುಶಾಹಿ ಆಡಳಿತಗಾರರಿಂದ ಅರಣ್ಯ ಕಾಯಿದೆ ಮತ್ತು ಅಪರಾಧ ಬುಡಕಟ್ಟು/ಆದಿವಾಸಿಗಳ ಕಾಯಿದೆ ಹಾಗೂ ಈ ಕಾನೂನುಗಳು ಕಾಡಿನಲ್ಲಿ ವಾಸಿಸುತ್ತಿದ್ದ ಜನರ ಬದುಕನ್ನು ಹೇಗೆ ಬಾಧಿಸಿದವು ಎಂಬ ಇತಿಹಾಸವನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತದೆ. ಕೀನ್ಯಾದಲ್ಲಿ ಮಸಾಯಿ ಮರಾದ ಗೋಮಾಳವನ್ನು ವಸಾಹತುಶಾಹಿಗಳು ವನ್ಯಜೀವಿ ಮೀಸಲು ವಲಯವನ್ನಾಗಿ ಪರಿವರ್ತಿಸಿದರು. ಉದಾಹರಣೆಗೆ, ಸುಮಾರು 14,760 ಕಿ.ಮೀ ವ್ಯಾಪ್ತಿಯ ಸೆರೆಂಗೆಟಿ ರಾಷ್ಟ್ರೀಯ ಉದ್ಯಾನವನ್ನು ಮಸಾಯಿ ಗೋಮಾಳದಲ್ಲಿ ಸೃಷ್ಟಿಸಲಾಯಿತು. ಸಾಮಾಜಿಕ ಮತ್ತು ರಾಜಕೀಯ ಬದುಕಿನ ಪಠ್ಯಪುಸ್ತಕಗಳು ಇವಿಎಸ್ ನ ಅನೇಕ ವಿಚಾರಗಳನ್ನು ಮುನ್ನೆಲೆಗೆ ತರುತ್ತವೆ ಹಾಗೂ ವಿವಿಧ ಆಯಾಮಗಳನ್ನು ಕುರಿತು ಚರ್ಚೆ ನಡೆಸುತ್ತವೆ. ಉದಾಹರಣೆಗೆ - ನೀರು. ಇದು ನೀರಿಗೆ ಸಂಬಂಧಿಸಿದ ಅಧಿಕಾರದ ಪ್ರಶ್ನೆಯನ್ನು ಎತ್ತುತ್ತದೆ. ಯಾರು ನೀರನ್ನು ಪಡೆಯುತ್ತಾರೆ? ಯಾರು ಎಷ್ಟು ಪ್ರಮಾಣದ ನೀರನ್ನು ಪಡೆಯುತ್ತಾರೆ? ಯಾರು ಎಷ್ಟು ಗುಣಮಟ್ಟದ ನೀರನ್ನು ಪಡೆಯುತ್ತಾರೆ? ಯಾರು ನೀರು ತರುತ್ತಾರೆ? ಇತ್ಯಾದಿ.

'ಕಡೆಗಣಿಸುವಿಕೆಯನ್ನು ಅರ್ಥಮಾಡಿಕೊಳ್ಳುವುದು (Understanding Marginalisation)' ಅಧ್ಯಾಯದ ಆಯ್ದಭಾಗ :

'ಇತಿಹಾಸದ ಪಠ್ಯಪುಸ್ತಕವು, ವಸಾಹತುಶಾಹಿ ಸರ್ಕಾರವು ಅರಣ್ಯ ನೀತಿಗಳನ್ನು ರೂಪಿಸುವುದನ್ನು ಒತ್ತಿ ಹೇಳುತ್ತದೆ ಮತ್ತು ಅರಣ್ಯ ನಾಶದಂತಹ ವಿಚಾರವನ್ನು ಈ ನೀತಿಗಳ ಅಭಿವ್ಯಕ್ತಿಯಾಗಿ ಪರಿಗಣಿಸುತ್ತದೆ. ಆದರೂ ಭಾರತದ ಆದಿವಾಸಿಗಳ ಸಾಮಾಜಿಕ ಮತ್ತು ರಾಜಕೀಯ ಜೀವನದ ಬಗ್ಗೆ ಹೇಳುವುದಾದರೆ, ಆಂಧ್ರ ಪ್ರದೇಶ, ಛತ್ತೀಸ್ ಗಢ, ಒಡಿಶಾ ಮತ್ತು ಜಾರ್ಖಂಡ್ ರಾಜ್ಯಗಳಿಂದ ಸ್ಥಳಾಂತರಗೊಂಡವರಲ್ಲಿ ಶೇಕಡ 79ರಷ್ಟು ಜನ ಆದಿವಾಸಿಗಳಾಗಿದ್ದಾರೆ. ಅವರ ಬೃಹತ್ ಪ್ರಮಾಣದ ಭೂಮಿಯು, ಸ್ವತಂತ್ರ ಭಾರತದಲ್ಲಿ ನಿರ್ಮಿಸಲಾದ ನೂರಾರು ಅಣೆಕಟ್ಟೆಗಳ ನೀರಿನ ಅಡಿಯಲ್ಲಿ ಹೂತು ಹೋಗಿದೆ. ಈಶಾನ್ಯ ಭಾರತದಲ್ಲಿ ಅವರ ಭೂಮಿಯು ಸೈನಿಕರಿಂದ ತುಂಬಿ ಹೋಗಿದೆ ಮತ್ತು ಯುದ್ಧ ಪೀಡಿತಗೊಂಡಿದೆ.'

ಸಮಕಾಲೀನ ಭಾರತವನ್ನು ಪ್ರಸ್ತುತ ಕಾಡುತ್ತಿರುವ ಸಮಸ್ಯೆಗಳನ್ನು ವಿದ್ಯಾರ್ಥಿಗಳ ಮುಂದಿಡಲಾಗಿದೆ. ಇದು ಈ ಸಂಘರ್ಷವನ್ನು ಕುರಿತು ವಿಮರ್ಶಾತ್ಮಕವಾಗಿ ಯೋಚಿಸಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸುತ್ತದೆ. ಈ ಕಾನೂನುಗಳು, ಹಿಂದಿನ ವಸಾಹತುಶಾಹಿ ಆಡಳಿತದ ಕಾನೂನುಗಳಿಗಿಂತ ಭಿನ್ನವಾಗಿವೆಯೇ? ಆದಿವಾಸಿಗಳನ್ನು ತಮ್ಮ ತಾಯ್ನಾಡಿನಿಂದ ಉಚ್ಚಾಟನೆ ಮಾಡುವುದನ್ನು ಕುರಿತಂತೆ ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ನೀಡಿದ ತೀರ್ಪು ಖಂಡಿತವಾಗಿಯೂ ವಿದ್ಯಾರ್ಥಿಗಳಿಗೆ ವಿಮರ್ಶಾತ್ಮಕವಾಗಿ ಚಿಂತಿಸಲು ಮತ್ತು ಮಾಹಿತಿಯುಕ್ತ ನಾಗರಿಕರಾಗಲು ಸಹಾಯ ಮಾಡುತ್ತದೆ.

ಹೀಗಾಗಿ, ಇವಿಎಸ್ ಪಠ್ಯಪುಸ್ತಕದಲ್ಲಿ ಎತ್ತಲಾಗಿರುವ ಮೌಲ್ಯಗಳು, ಕಾಳಜಿಗಳು, ವಿಚಾರಗಳು ಸಾಮಾಜಿಕ ವಿಜ್ಞಾನದಲ್ಲಿ ಹೆಚ್ಚು ಸಂಕೀರ್ಣ ರೀತಿಯಲ್ಲಿ ಪ್ರಗತಿ ಸಾಧಿಸುತ್ತಿರುವುದನ್ನು ನಾವು ನೋಡಬಹುದು.

***

## ಪರಾಮರ್ಶನಗಳು

National Curriculum Framework 2005

EVS NCERT Syllabus

Source Book of Assessment in EVS, Classes 1 to 5

India and the Contemporary World -I

India and the Contemporary World -II

Social and Political life- I and II

Man and Nature-George Perkins Marsh, edited by David Lowenthal

Education, Conflict and Peace-Krishna Kumar

Position Paper on Teaching of Social Sciences

**ಚಂದ್ರಿಕಾ ಮುರುಳೀಧರ್:** ಇವರು ಅಜೀಂ ಪ್ರೇಮ್‌ಜಿ ಫೌಂಡೇಶನ್ ನಲ್ಲಿ ಕಳೆದ ಒಂಬತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು, ಪ್ರಸ್ತುತ ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಕಂಟಿನ್ಯುಯಿಂಗ್ ಎಜುಕೇಶನ್ ಅಂಡ್ ಯುನಿವರ್ಸಿಟಿ ರಿಸೋರ್ಸ್ ಸೆಂಟರ್ ನಲ್ಲಿ ಇದ್ದಾರೆ. ಇಲ್ಲಿ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ತಮ್ಮ ಕೊಡುಗೆ ನೀಡುತ್ತಿದ್ದಾರೆ. ವಿಜ್ಞಾನ ಶಿಕ್ಷಣ, ಶಿಕ್ಷಕರ ಸಾಮರ್ಥ್ಯ ವೃದ್ಧಿ ಮತ್ತು ಪಠ್ಯಪುಸ್ತಕ ಬರವಣಿಗೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಮತ್ತು ಫೌಂಡೇಶನ್ ಹೊರತರುವ ಪ್ರಕಟಣೆಗಳ ಸಂಪಾದಕೀಯ ತಂಡದ ಅವಿಭಾಜ್ಯ ಅಂಗವಾಗಿದ್ದಾರೆ. ಅವರನ್ನು chandrika@azimpremjifoundation.org ಮೂಲಕ ಸಂಪರ್ಕಿಸಬಹುದು.

**ರೋನಿತಾ ಶರ್ಮ:** ಇವರು ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಇನ್ಸ್‌ಟಿಟ್ಯೂಟ್ ಆಫ್ ಅಸೆಸ್ಮೆಂಟ್ ಅಂಡ್ ಅಕ್ರೆಡೈಟೇಶನ್' ಜೊತೆಗೆ ಕೆಲಸ ಮಾಡುತ್ತಿದ್ದಾರೆ. ಇವರು ಶಿಕ್ಷಕರ ಸಾಮರ್ಥ್ಯ ರೂಪಿಸುವ ಕಾರ್ಯಕ್ರಮ, ಬೃಹತ್ ಪ್ರಮಾಣದ ಮೌಲ್ಯಮಾಪನ ಮತ್ತು ಪಠ್ಯಪುಸ್ತಕವನ್ನು ಬರೆಯುವುದರಲ್ಲಿ ತೊಡಗಿಸಿಕೊಂಡಿದ್ದಾರೆ. ಒಂದು ದಶಕಕ್ಕೂ ಹೆಚ್ಚು ಕಾಲ ಪ್ರಾಥಮಿಕ, ಪ್ರೌಢಶಿಕ್ಷಣ ಮತ್ತು ಇಂಟರ್ ಮಿಡಿಯೇಟ್ ತರಗತಿಗಳಿಗೆ ಸಮಾಜ ವಿಜ್ಞಾನವನ್ನು ಬೋಧಿಸಿದ್ದಾರೆ. ಅವರನ್ನು ronita.sharma@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: ಪರಿಶೀಲನೆ: ನಾಗಮಣಿ ಎಸ್. ಎನ್.